e ಜೀವನ

# ಐಟಿಗೆ ಮನ್ನಣೆ

ತಂತ್ರಜ್ಞಾನ ಮತ್ತು ನೂತನ ಉದ್ಯಮಗಳ ಅಭಿವೃದ್ಧಿಗೆ ಭಾರತ ಸರ್ಕಾರವು ಕಟಿಬದ್ಧವಾಗಿರುವ ಅಂಶವನ್ನು ಈ ಬಾರಿಯ ಬಜೆಟ್ ಪ್ರಕಟಣೆ ಮತ್ತೊಮ್ಮೆ ಸಾಬೀತುಪಡಿಸಿದೆ. ಸತತವಾಗಿ ಪ್ರಗತಿಪಥದಲ್ಲಿ ಸಾಗುತ್ತಿರುವ ಮಾಹಿತಿ ತಂತ್ರಜ್ಞಾನ ಕ್ಷೇತ್ರದೊಂದಿಗೇ ಉಜ್ವಲ ಭವಿಷ್ಯದ ಭರವಸೆ ಮೂಡಿಸಿರುವ ಬಯೋಟೆಕ್ನಾಲಜಿ ಮತ್ತು ಫಾರ್ಮ ಉದ್ಯಮಗಳನ್ನು ಒಂದೇ ಗುಂಪಿನಲ್ಲಿ ಈ ಬಾರಿ ಸೇರಿಸಿರುವುದು ಗಮನಾರ್ಹ. ಅದರಂತೆ ಈವರೆಗೆ ಐಟಿ ಸಂಸ್ಥೆಗಳಿಗಷ್ಟೇ ನೀಡಲಾಗುತ್ತಿದ್ದ ತೆರಿಗೆ ವಿನಾಯಿತಿಗಳನ್ನು ಈಗ ಫಾರ್ಮ ಹಾಗೂ ಜೈವಿಕ ತಂತ್ರಜ್ಞಾನ ಸಂಸ್ಥೆಗಳಿಗೂ ವಿಸ್ತರಿಸಲಾಗಿದೆ. ಉದಾಹರಣೆಗೆ ಪ್ರಯೋಗಾರ್ಥವಾಗಿ ವಿದೇಶಗಳಿಂದ ಆಮದು ಮಾಡಿಕೊಂಡ ಅಥವಾ ಇಲ್ಲೇ ತಯಾರಿಸಲ್ಪಟ್ಟ ಔಷಧೀಯ ಉತ್ಪನ್ನಗಳ ಮೇಲೆ ಸರ್ಕಾರ ಸಂಪೂರ್ಣ ತೆರಿಗೆ (ಆಮದು ತೆರಿಗೆ) ವಿನಾಯಿತಿ ನೀಡಿದೆ.

ಐಟಿ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ, ಹಿಂದಿನ ಬಜೆಟ್ ಪ್ರಸ್ತಾವನೆಗಳನ್ನು ಈ ಬಾರಿಯೂ ಹಣಕಾಸು ಮಂತ್ರಿ ಶ್ರೀ ಜಸ್ವಂತ್‌ಸಿಂಗ್ ಮುಂದುವರೆಸಿದ್ದಾರೆ. ಐಟಿ ಸಂಸ್ಥೆಗಳಿಗೆ ಅನುಕೂಲವಾಗಿರುವ ಅಧಿನಿಯಮ 10ಎ ಮತ್ತು 10ಬಿಗಳನ್ನು ಮುಂದುವರೆಸಿರುವುದನ್ನು ಐಟಿ ಉದ್ಯಮಿಗಳು ಸ್ವಾಗತಿಸಿದ್ದಾರೆ. ಇತ್ತೀಚಿನವರೆಗೆ ಆಮದು ಮಾಡಿಕೊಳ್ಳುವ ಬಿಡಿ ಭಾಗಗಳೊಂದಿಗೆ ಸೇರಿಸಲ್ಪಟ್ಟ ಸಾಫ್ಟ್‌ವೇರಿಗೂ ತೆರಿಗೆ ನೀಡಬೇಕಾಗಿತ್ತು. ಈ ಬಾರಿ ಅಂತಹ ತೆರಿಗೆಯಿಂದ ಸಂಪೂರ್ಣವಾಗಿ ವಿನಾಯಿತಿ ನೀಡಲಾಗಿದೆ. ಈ ಪ್ರಸ್ತಾವನೆಯಿಂದ ನಮ್ಮ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗೆ ಅನೇಕ ಪ್ರಯೋಜನಗಳಿವೆ. ಇದು ಕಳ್ಳ ಸಾಫ್ಟ್‌ವೇರ್ ಮಾರಾಟಕ್ಕೆ ಕಡಿವಾಣ ಹಾಕುತ್ತದೆ. ಈ ಪ್ರಸ್ತಾವನೆಯ ಮುಖ್ಯ ಪ್ರಯೋಜನವೆಂದರೆ ಜನಸಾಮಾನ್ಯರಲ್ಲಿ ಕಂಪ್ಯೂಟರ್ ಬಳಕೆ ಹೆಚ್ಚುತ್ತದೆ. ಹಾಗೆಯೇ ನ್ಯಾಯಯುತವಾದ ಸಾಫ್ಟ್‌ವೇರ್ ಬಳಕೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ (IP rights) ಬೆಳವಣಿಗೆಗಳನ್ನು ಇದು ಪ್ರೋತ್ಸಾಹಿಸುತ್ತದೆ.

ಹಾಗೆಯೇ ಅನೇಕ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸರಕುಗಳ ಮೇಲಿನ ಆಮದು ಶುಲ್ಕವನ್ನು ಶೇ.25ರಿಂದ 15ಕ್ಕೆ ಇಳಿಸಲಾಗಿದೆ. ದೂರಸಂಪರ್ಕ ಕ್ಷೇತ್ರದ ಅಭಿವೃದ್ಧಿಗೆ, ಆಪ್ಟಿಕಲ್ ಫೈಬರ್‌ಗಳ ಮೇಲೆ ಅಮದು ತೆರಿಗೆ ಕಡಿಮೆಗೊಳಿಸುವುದೇ ಅಲ್ಲದೇ ಆಪ್ಟಿಕಲ್ ಫೈಬರ್ ತಯಾರಿಕೆಯಲ್ಲಿ ಉಪಯೋಗಿಸುವ ಇ-ಗ್ಲಾಸ್ ರೋವಿಂಗ್ ಎಂಬ ಕಚ್ಚಾ ವಸ್ತುವಿನ ಮೇಲೆ ಆಮದು ತೆರಿಗೆಯನ್ನು ಶೇ.30ರಿಂದ ಶೇ.15ಕ್ಕೆ ಇಳಿಸಲಾಗಿದೆ.

ಈ ಬಜೆಟ್‌ನ ಇನ್ನೊಂದು ಪ್ರಮುಖ ಅಂಶವೆಂದರೆ ಕೇಂದ್ರ ಸರ್ಕಾರದ ಆದಾಯ ಮತ್ತು ಆಮದು ತೆರಿಗೆ ವಿಭಾಗಗಳನ್ನು ಸಂಪೂರ್ಣವಾಗಿ ಗಣಕೀಕರಿಸುವ ಬಗ್ಗೆ ಕೈಗೊಂಡಿರುವ ನಿರ್ಧಾರ. ಈ ಪ್ರಸ್ತಾವನೆಯಿಂದ ನಮ್ಮ ಸರ್ಕಾರಿ ವಿಭಾಗಗಳಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರವನ್ನು ನಿವಾರಿಸಿ, ಹೊಸ ಮುಕ್ತ ವಾತಾವರಣವನ್ನು ಸೃಷ್ಟಿಸುವಲ್ಲಿ ಸಹಕಾರಿಯಾಗಲಿದೆ.

ಈ ಬಜೆಟ್‌ನಲ್ಲಿ ಐಟಿ ಕ್ಷೇತ್ರಕ್ಕೆ ಸಾಂಪ್ರದಾಯಿಕವಾಗಿ ಸಿಗುವ ಸರ್ಕಾರಿ ಪ್ರೋತ್ಸಾಹ ಮುಂದುವರಿದಿದೆ. ಎಲ್ಲಕ್ಕಿಂತ ಮಿಗಿಲಾಗಿ ಸಂಶೋಧನೆ ಮತ್ತು ಅಭಿವೃದ್ಧಿ(R&D)ಗೆ ಸರ್ಕಾರ ನೀಡುತ್ತಿರುವ ಮನ್ನಣೆ (ಸಂಪೂರ್ಣ ತೆರಿಗೆ ರಜೆ ನೀಡುವ ಮೂಲಕ) ಮುಂದುವರಿದಿದೆ. ಇದರಿಂದ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಇನ್ನಷ್ಟು ಮೈಲಿಗಲ್ಲುಗಳನ್ನು ದಾಟುವಂತಾಗಲಿ.

ಜಿ.ಪಿ. ವಿನಯಬಾಬು